ಹೋದರೆ ಹೇಗೆ? ಇದು ದಿನನಿತ್ಯ ಸರ್ವೇಸಾಮಾನ್ಯವಾದ ಸಂಗತಿಯಾಗಿದೆ.

ಅಧ್ಯಕ್ಷರು : ನಮ್ಮ ಅಧಿಕಾರಿಗಳು ಎಲ್ಲಾ ಪ್ರಶ್ನೆಗಳ ಮುಂದೆ 'ಟಿ' ಎಂದು ಬರೆದಿದ್ದಾರೆ. ನಾನು ಅದನ್ನು 'ಟ್ರಾನ್ಸಪೋರ್ಟ ಮಿನಿಸ್ಟರ'ಗೆ ಸಂಬಂಧಿಸಿದ ಪ್ರಶ್ನೆಗಳು ಎಂದು ಭಾವಿಸಿದ್ದೆ. ಆದರೆ, ಯಾವ ಪ್ರಶ್ನೆಗಳ ಎದುರು 'ಟಿ' ಎಂದು ಬರೆಯಲಾಗಿದೆಯೋ ಅಂತಹ ಪ್ರಶ್ನೆಗಳಿಗೆ ಉತ್ತರಿಸಲು ಸಮಯ ಕೇಳಿದ್ದಾರೆ ಎಂದು ಈಗ ಅರ್ಥವಾಯಿತು.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನಿನ್ನೆ ತಾನೇ ಇಲಾಖೆಗೆ ಬಂದಿದೆ. ಆದ್ದರಿಂದ ಪ್ರಶ್ನೆಗೆ ಉತ್ತರಗಳನ್ನು ಕಳುಹಿಸಲು ಸಾಧ್ಯವಾಗಿರುವುದಿಲ್ಲ. ಈಗ ನನ್ನ ಬಳಿ ಲಭ್ಯವಿರುವ ಮಾಹಿತಿ ಆಧರಿಸಿ ಆ ಬಗ್ಗೆ ವಿವರ ನೀಡಿ, ನಂತರ ಅವರಿಗೆ ಉತ್ತರಗಳನ್ನು ಕಳುಹಿಸಿಕೊಡಲೇ?

ಅಧ್ಯಕ್ಷರು : ಮಾನ್ಯ ಸಾರಿಗೆ ಮಂತ್ರಿಗಳೇ, ಆ ರೀತಿ ಮಾಡಲಾಗುವುದಿಲ್ಲ. ನನ್ನ ಅಂದಾಜು ಪ್ರಕಾರ ಬಹುಶಃ ಎರಡನೇ ಬಾರಿಗೆ ಮಾನ್ಯ ಸದಸ್ಯರ ಪ್ರಶ್ನೆ ಸದನದಲ್ಲಿ ಪ್ರಸ್ತಾಪ ಮಾಡಲು ಅವರಿಗೆ ಅವಕಾಶ ಸಿಕ್ಕಿದೆ. ಈ ರೀತಿ ಅವರ ಪ್ರಶ್ನೆಗಳಿಗೆ ಉತ್ತರ ಬರದಿದ್ದರೆ ಹೊಸ ಶಾಸಕರಾದ ಅವರು ಸದನದ ಕಾರ್ಯಕಲಾಪಗಳಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಮಾನ್ಯ ಚಂದ್ರಶೇಖರ್ ನಾಯಕರವರೇ, ಮಾನ್ಯ ಮಂತ್ರಿಗಳು ತಮ್ಮ ಪ್ರಶ್ನೆಗೆ ಉತ್ತರಿಸಲು ಸ್ವಲ್ಪ ಸಮಯ ಕೇಳಿದ್ದಾರೆ. ಮತ್ತೊಂದು ದಿವಸ ಅದನ್ನು ತೆಗೆದುಕೊಳ್ಳೋಣ. ದಯವಿಟ್ಟು ಸಹಕರಿಸಿ. ತಮಗೆ ಮಾಹಿತಿ ತರಿಸಿಕೊಡುತ್ತೇನೆ.

ಕಮಲಾಪುರ ಕ್ಷೇತ್ರದಲ್ಲಿ ನಕಲಿ ಬೀಜಗಳ ವಿತರಣೆ

118 - ಶ್ರೀ ರೇವನಾಯಕ್ ಬೆಳಮಗಿ (ಕಮಲಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಮಲಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರುಗಳಿಗೆ ನಕಲಿ ಸೂರ್ಯಕಾಂತಿ ಬೀಜಗಳನ್ನು ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಆ) ಇಂತಹ ಬೀಜಗಳನ್ನು ಬಿತ್ತಿದ ರೈತರುಗಳು ತುಂಬಾ ನಷ್ಟವನ್ನು ಅನುಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ರೈತರುಗಳಿಗೆ ಪರಿಹಾರ ಹಣವನ್ನೇನಾದರೂ ನೀಡಿದೆಯೇ; ನೀಡಿದ್ದಲ್ಲಿ ಎಷ್ಟೆಷ್ಟು ನೀಡಲಾಯಿತು ? ಇಲ್ಲದಿದ್ದಲ್ಲಿ ಯಾವಾಗ ಹಣವನ್ನು ನೀಡಲಾಗುವುದು ? ನೀಡಲಾದ ಪರಿಹಾರ ಮೊತ್ತವೆಷ್ಟು ?

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) :

ಅ) ಕಮಲಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರಿಗೆ ನಕಲಿ ಸೂರ್ಯಕಾಂತಿ ಬೀಜ ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಹಾಗೂ ರೈತರೂ ಸಹ ಇಂತಹ ದೂರುಗಳನ್ನು ಇಲಾಖೆಗೆ ಸಲ್ಲಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ರೇವು ನಾಯಕ್ ಬೆಳಮಗಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನೆನೋ ಒದಗಿಸಿದ್ದಾರೆ. ಆದರೆ ಒಂದು ಮಾಹಿತಿ ನನಗೆ ಬಹಳ ನೋವಾಗುತ್ತಿದೆ. ದಿನಾಂಕ 28.2.95ರಂದು ಸದನದಲ್ಲಿ ಕಾವೇರಿ ವಿಷಯವು ಚರ್ಚೆಯಾಗುತ್ತಿತ್ತು. ಇದೇ ಸಂದರ್ಭದಲ್ಲಿ ಇದೇ ಸ್ಥಾನದಲ್ಲಿ ನಾನು ಮಂತ್ರಿಗಳಿಗೊಂದು ಮನವಿ ಪತ್ರವನ್ನು ಕೊಟ್ಟಿದ್ದೇನೆ. ನನ್ನ ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಸಾಕಷ್ಟು ಸೂರ್ಯಕಾಂತಿ ಬೀಜಗಳು ಮಾರಾಟವಾಗಿವೆ. ಮಾರಾಟಗಾರರು ನಕಲಿ ಬೀಜಗಳನ್ನು ಏನು ಮಾರಿದ್ದಾರೆ, ಆ ಬಗ್ಗೆ ತಾವು ಏನಾದರೂ ಪರಿಹಾರ ಕಂಡು ಹಿಡಿದು ನೀವು ರೈತರಿಗೆ ಪರಿಹಾರ ಕೊಡುತ್ತೀರಾ? ಎಂದು ನಾನು ನಿಮಗೆ ಕೇಳಿದ್ದೀನಿ. ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ನನಗೆ 'ನೀವು ಸಭಾನಾಯಕರನ್ನು ಈ ಬಗ್ಗೆ ವಿನಂತಿ ಮಾಡಿಕೊಳ್ಳಿ, ತಮ್ಮ ಸಮಸ್ಯೆ ಏನಾದರೂ ಒಂದು ಪರಿಹಾರ ಮಾಡೋಣ' ಎಂದು ತಿಳಿಸಿದ್ದರು. ಆದರೆ ಒಂದು ವಿಷಯದಲ್ಲಿ ನನಗೆ ನೋವಾಗುತ್ತಿದೆ. ಅತಿ ಸಣ್ಣ ರೈತರು ಹಾಗೂ ಬಡ ರೈತರಿಗೆ ಒಳ್ಳೆಯ ಗುಣಮಟ್ಟದ ಬೀಜಗಳನ್ನು ಕೊಂಡು ತರಲಿಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಗೆ ಓದು ಬರಹ ಬರುವುದಿಲ್ಲ. ಸೂರ್ಯಕಾಂತಿಯ 'ಕಾರ್ಗಿಲ್-41' ಎಂಬ ಹೆಸರಿನ ಬೀಜಗಳಿಂದ ಬೆಳೆಯಲ್ಪಟ್ಟ ಬೆಳೆಯು ಬಹಳಷ್ಟು ಕಡೆ ವಿಫಲವಾಗಿದೆ.

ಅಧ್ಯಕ್ಷರು : ಮಾನ್ಯ ರೇವು ನಾಯಕ್ ಬೆಳವಗಿಯವರೇ, ತಾವು ಪ್ರಶ್ನೆ ಏನು ಕೇಳಿದ್ದೀರಿ ಎಂದರೆ, ನಿಮ್ಮ ವಿಧಾನ ಸಭಾ ಕ್ಷೇತ್ರದಲ್ಲಿ ನಕಲಿ ಬೀಜದ ವಿತರಣೆಯಾಗಿ ರೈತರಿಗೆ ನಷ್ಟವಾಗಿದೆಯೇ ಎಂದು ಕೇಳಿದ್ದೀರಿ. ತಮ್ಮ ಪ್ರಶ್ನೆಗೆ ಸರ್ಕಾರದವರು 'ಅಂತಹ ಪ್ರಕರಣ ತಮ್ಮ ಗಮನಕ್ಕೆ ಬಂದಿಲ್ಲ' 'ನಕಲಿ ಬೀಜ ಯಾವುದೂ ಅಲ್ಲಿ ವಿತರಣೆಯಾಗಿಲ್ಲ' ಎಂಬ ಉತ್ತರವನ್ನು ನೀಡಿದ್ದಾರೆ. ಅದಕ್ಕೆ ಸಂಬಂಧಿಸಿದಂತೆ ಮಾತ್ರ ನೀವು ಇಲ್ಲಿ ಉಪ ಪ್ರಶ್ನೆಯನ್ನು ಕೇಳಬೇಕು.

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೇ, ನಾನೇ ಸ್ವತಃ ಆ ಬಗ್ಗೆ ಹಿಂದೆ ಸರ್ಕಾರಕ್ಕೆ ಮನವಿ ಪತ್ರ ಕೊಟ್ಟಿದ್ದೇನೆ.

ಡಾ. ಎಂ.ಪಿ. ಕರ್ಕಿ : ಮಾನ್ಯ ಸದಸ್ಯರು ಹಿಂದೆ ಕೊಟ್ಟ ಮನವಿ ಪತ್ರಕ್ಕೆ ಮಾನ್ಯ ಮಂತ್ರಿಗಳು 'ಪರಿಶೀಲಿಸಲಾಗುವುದು' ಎಂದು ತಿಳಿಸಿದ್ದರು. ಆದರೆ ಆ ಬಗ್ಗೆ ಯಾವುದೇ ಕ್ರಮ ಕೈಗೊಂಡ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂಬ ವಿಚಾರವನ್ನು ಮಾನ್ಯ ಸದಸ್ಯರು ತಮ್ಮ ಗಮನಕ್ಕೆ ತರುತ್ತಿದ್ದಾರೆ.

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಮಾನ್ಯ ಮಂತ್ರಿಗಳಿಗೆ ಈ ಬಗ್ಗೆ ಮನವಿ ಕೊಟ್ಟಾಗ ಪರಿಶೀಲಿಸುತ್ತೇನೆ ಎಂದು ತಿಳಿಸಿದ್ದರು. ಆದರೆ ಆ ರೀತಿ ಈ ಪ್ರಶ್ನೆಗೆ ಕೊಟ್ಟಂತಹ ಉತ್ತರದಲ್ಲಿ ತಿಳಿಸಿಲ್ಲ. ತಿಳಿಸಿದ್ದರೆ ನನಗೆ ಸಮಾಧಾನ ಆಗುತ್ತಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸೀಮಿತವಾಗಿ ಸೂರ್ಯಕಾಂತಿ ಬೀಜದ ಬಗ್ಗೆ ಮಾತ್ರ ಪ್ರಸ್ತಾವ ಮಾಡುತ್ತಿದ್ದಾರೆ. ಮಾನ್ಯ ಸಚಿವರಿಗೂ ಇದು ಗೊತ್ತಿರಬಹುದು. ಎಲ್ಲಾ ಕಡೆಯೂ ಕಳಪೆ ಬೀಜಗಳನ್ನು ಸಪ್ಲೈ ಮಾಡುತ್ತಿದ್ದಾರೆ. ರೈತ ಎಷ್ಟು ಕಷ್ಟಪಟ್ಟು

ದುಬಾರಿ ಗೊಬ್ಬರಗಳನ್ನು ಹಾಕಿದ್ದರೂ ನಕಲಿ ಬೀಜಗಳಿಂದಾಗಿ ಅವನಿಗೆ ಸರಿಯಾದ ರೀತಿಯಲ್ಲಿ ಅದರ ಫಲ ಸಿಗದೇ ಅವನು ಬೀದಿ ಪಾಲಾಗುವಂತಹ ಸಂದರ್ಭ ಉದ್ಭವಿಸಿದೆ. ಸೂರ್ಯಕಾಂತಿ ಬೀಜಗಳ ವಿತರಣೆಯಲ್ಲೂ ಅದೇ ರೀತಿ ಆಗಿದೆ. ನೆಲಗಡಲೆಯನ್ನು ಬೇರೆ ಯಾವುದನ್ನೋ ಉಪಯೋಗ ಮಾಡಿದ್ದೇವೆ, ಅದರಿಂದಾಗಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲೂ ಇದೇ ರೀತಿಯ ಅನುಭವವಾಗಿದೆ. ಈಗಲಾದರೂ ಸರ್ಕಾರ ಎಚ್ಚೆತ್ತು ಯಾವ ರೈತ ಇಲಾಖೆಯನ್ನು ನಂಬಿಕೊಂಡು ಬಿತ್ತನೆ ಪಡೆಯುತ್ತಾನೆ, ಅವನಿಗೆ ಇಲಾಖೆಯವರು ಅತ್ಯಂತ ಉತ್ತಮ ಗುಣಮಟ್ಟದ ಬೀಜಗಳನ್ನು ಸಂಗ್ರಹ ಮಾಡಿ ವಿತರಿಸಬೇಕು. ಈ ರೀತಿ ಮಾಡುವುದರ ಮೂಲಕ ಸರ್ಕಾರ ಆ ರೈತನನ್ನು ಉಳಿಸುವಂತಹ ಕಡೆಗೆ ವಿಶೇಷ ಗಮನಕೊಡಬೇಕು. ಇಂತಹ ಎಲ್ಲಾ ಪ್ರಕರಣಗಳೂ ಸಹ ಮಾನ್ಯ ಮಂತ್ರಿಗಳ ಗಮನಕ್ಕೆ ಬಾರದಿದ್ದರೂ, ಅವುಗಳು ಅನುಭವಕ್ಕೆ ಬಂದಿರಬಹುದು. ದಯಮಾಡಿ ನಿಮ್ಮ ಕಾಲದಲ್ಲದಾರೂ ಈ ವಿತರಣೆಯನ್ನು ಸರಿಪಡಿಸುವಂತಹ ವ್ಯವಸ್ಥೆಯಾಗಬೇಕು, ರೈತನನ್ನು ಉಳಿಸಬೇಕು. ಇದು ಕೇವಲ ಅವರ ತಾಲ್ಲೂಕಿಗಷ್ಟೇ ಸೀಮಿತವಾಗಿಲ್ಲ. ಅನೇಕ ಕಡೆಗಳಲ್ಲಿ ನಮಗೆ ಇಂತಹ ಪ್ರಕರಣಗಳಿಂದ ಕಹಿ ಅನುಭವ ಆಗಿದೆ. ಇದನ್ನು ಸರಿ ಪಡಿಸಲಿಕ್ಕೆ ಏನಾದರೂ ಮಾಡುತ್ತೀರಾ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೇ ಅಥವಾ ಬೇರೆ ಸದಸ್ಯರೇ ಇದಕ್ಕೆ ಗುರಿಯಾಗಿದ್ದಾರೆ ಎಂದು ನಾನು ಭಾವಿಸುವುದಿಲ್ಲ. ಈ ವರ್ಷ ನಾನೂ ಸಹ ಇದಕ್ಕೆ ಗುರಿಯಾಗಿದ್ದೇನೆ. ಯಾವುದೋ ಕಂಪನಿಯ ಕಲ್ಲಂಗಡಿ ಬೀಜ; ತಂದು, ಹಣ ಹೆಚ್ಚಿಗೆ ಬರುತ್ತದೆ ಎಂದು ಹಾಕಿ, ಆ ಬೆಳೆ ಪೂರ್ತಿಯಾಗಿ ಹಾಳಾಯಿತು. ಇಂತಹ ಪ್ರಕರಣಗಳು ಎಲ್ಲೇ ಆಗಲೀ ನನ್ನ ಗಮನಕ್ಕೆ ಬಂದ ತಕ್ಷಣ ನಾನು ವಿಶ್ವವಿದ್ಯಾನಿಲಯದಲ್ಲಿರತಕ್ಕ ವಿಜ್ಞಾನಿಗಳನ್ನು ಸ್ಥಳಕ್ಕೆ ಕಳುಹಿಸತಕ್ಕಂಥ ಏರ್ಪಾಡು ಮಾಡಿಸಿದ್ದೇನೆ. ವಿಜ್ಞಾನಿಗಳು ಅಲ್ಲಿಗೆ ಹೋಗಿ ಬಂದ ನಂತರ ಏನು ಹೇಳುತ್ತಾರೆ ಎಂದರೆ, ಬೀಜದ ಗುಣಮಟ್ಟಕ್ಕಿಂತ ಹೆಚ್ಚಿಗೆ ಬೇರೆ ಕಾರಣಗಳು ಇವೆ ಎಂದು ಬಹುತೇಕ ಸಂದರ್ಭಗಳಲ್ಲಿ ವಿಜ್ಞಾನಿಗಳು ವರದಿಯನ್ನು ಕೊಟ್ಟಿದ್ದಾರೆ. ಕಮಲಾಪುರ ಕ್ಷೇತ್ರದಲ್ಲಿ ಆಗಿರತಕ್ಕಂತಹದ್ದರ ಬಗ್ಗೆ ವಿಜ್ಞಾನಿಗಳು ಇವತ್ತು ಅಲ್ಲಿಗೆ ಮಳೆ ಹೆಚ್ಚಿಗೆ ಆಗಿದ್ದರಿಂದ, ಬೆಳೆಗಳು ನಷ್ಟಕ್ಕೊಳಗಾಗಿವೆ ಎಂದು ಹೇಳುತ್ತಾರೆ. ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಮಳೆ ಬಂದಿತ್ತು ಎಂಬ ಬಗ್ಗೆ ಅಂಕಿ-ಅಂಶಗಳು ನನ್ನ ಹತ್ತಿರ ಇವೆ. ಸೂರ್ಯಕಾಂತಿ ಹೂವು ಬರತಕ್ಕಂತಹ ಅವಧಿಯಲ್ಲಿ ಕಮಲಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸಾಮಾನ್ಯವಾಗಿ 69 ಮಿ.ಮೀ.ಗಳಷ್ಟು ಮಳೆಯಾಗಬೇಕಾಗಿತ್ತು. ಆದರೆ ಆ ಅವಧಿಯಲ್ಲಿ ಸದರಿ ಸ್ಥಳದಲ್ಲಿ 250 ಮಿ.ಮೀ.ಗಳಷ್ಟು ಮಳೆಯಾಗಿದೆ. ಈ ಬಗ್ಗೆ ನಮಗೆ ಬಂದಿರತಕ್ಕ ವರದಿಯ ಆಧಾರದ ಮೇಲೆ ಹೇಳುವುದಾದರೆ, ವಾಯುಭಾರ ಕುಸಿತದಿಂದಾಗಿ ಮಳೆ ಹೆಚ್ಚಾಗಿ 'ಪರಾಗಸ್ಪರ್ಶ ಕ್ರಿಯೆ' ನಡೆಯಲಿಲ್ಲ. ಇದರಿಂದಾಗಿ ಹೂವು ಬರದೇ ಇಳುವರಿ ಕಡಿಮೆಯಾಯಿತು. ಕಮಲಾಪುರ ಕ್ಷೇತ್ರದಲ್ಲಿ ಸಾಮಾನ್ಯವಾಗಿ 7-9 ಕ್ವಿಂಟಾಲಗಳಷ್ಟು ಇಳುವರಿ ಬರಬೇಕಾಗಿತ್ತು. ಆದರೆ ಇವತ್ತಿನ ದಿವಸ ಕೇವಲ 3½ ರಿಂದ 4 ಕ್ವಿಂಟಾಲಗಳಷ್ಟು ಮಾತ್ರ ಇಳುವರಿ ಬಂದಿದೆ. ಬೆಳೆ ನಷ್ಟವಾಗಿದೆ ಎಂಬುದನ್ನು ನಾನೂ ಒಪ್ಪುತ್ತೇನೆ. ಕಮಲಾಪುರ ಕ್ಷೇತ್ರದಲ್ಲಿ ಸೂರ್ಯಕಾಂತಿ ಬೆಳೆಗೆ ಆಗಿರತಕ್ಕ ಹಾನಿಗೆ ಇವತ್ತು ವಿಮೆ ಇದೆ. ವಿಮೆಯಿಂದ

ತಾವು ಹಣವನ್ನು ಪಡೆಯಲು ಸಾಧ್ಯವಿದೆ. ಬೆಳೆಗೆ ಹಾನಿಯಾಗಿರತಕ್ಕವರು ಈ ವಿಮೆ ಯೋಜನೆಯನ್ನು ಬಳಸಿಕೊಳ್ಳತಕ್ಕದ್ದು ಸೂಕ್ತ ಎಂದು ನನಗನಿಸುತ್ತದೆ. ರಾಜ್ಯಾದ್ಯಂತ ಈ ರೀತಿ ಆಗುತ್ತಿದೆ. ನಕಲಿ ಬೀಜಗಳನ್ನು ವಿತರಣೆ ಮಾಡುವುದರ ವಿರುದ್ಧ ನಾವು ಈ ವರ್ಷ ಬಹಳ ಕಠಿಣವಾದಂತಹ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಬೀಜಗಳ ಗುಣಮಟ್ಟದ ಬಗ್ಗೆ ಸರ್ಟಿಫೈ ಮಾಡುವ ಏಜೆನ್ಸಿ ಇದೆಯಲ್ಲ, ಅಲ್ಲಿ ಅರ್ಧ ಡಜನ್ ಜನರು ಇದ್ದಾರೆ. ಅವರ ಬಗ್ಗೆ ನಿಮಗೂ ಗೊತ್ತಿದೆ. ಅವರನ್ನೂ ಕೂಡ ಲಾಕಪಗೆ ಕಳುಹಿಸಿ. ಸುಮಾರು ಕಡೆ ಅವರು ಈ ಕೆಲಸ ಮಾಡಿದ್ದಾರೆ. ಮಾನ್ಯ ಮಂತ್ರಿಗಳಿಗೆ ಅವರು ನಮ್ಮ ಊರಿನಲ್ಲಿ ಮಾಡಿರತಕ್ಕ ಕೆಲಸ ಗೊತ್ತೇ ಇದೆಯಲ್ಲ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಬೆಳೆ ವಿಮೆ ಬಗ್ಗೆ ಹೇಳಿದರು. ಸಂಪೂರ್ಣ ಒಂದು ತಾಲ್ಲೂಕು ಅಥವಾ ಒಂದು ಭಾಗದಲ್ಲಿನ ಬೆಳೆ ನಾಶವಾದಾಗ ಮಾತ್ರ ಬೆಳೆ ವಿಮೆ ಯೋಜನೆ ಅನ್ವಯವಾಗುತ್ತದೆ. ಇಳುವರಿ ಕಡಿಮೆ ಬಂದಾಗ ಆ ಯೋಜನೆಯು ಅನ್ವಯವಾಗುವುದಿಲ್ಲ. ಆದ್ದರಿಂದ ರೈತನಿಗೆ ಆ ಯೋಜನೆಯಿಂದ ಒಂದು ರೂಪಾಯಿ ಕೂಡ ಬೆನಿಫಿಟ್ ಸಿಗುವುದಿಲ್ಲ. ತಾವು ಪರಾಗಸ್ಪರ್ಶದ ಬಗ್ಗೆ ಹೇಳಿದಿರಿ, ಅದು ಏನಾದರೂ ಇರಲಿ, ಯಾರೋ ಡೂಪ್ಲಿಕೇಟ್ ಬೀಜಗಳನ್ನು ತಂದು ಅವರು ಒಳವ್ಯವಹಾರ ಮಾಡಿಕೊಂಡು ಮಾರುತ್ತಿರುವಂತಹ ಹತ್ತಾರು ಉದಾಹರಣೆಗಳನ್ನು ನಾನು ನಿಮಗೆ ಕೊಡಬಲ್ಲೆ. ಇದು ನಿಮಗೂ ಅನುಭವ ಆಗಿದೆ. ನಾನೂ ನನ್ನ ಹೊಲದಲ್ಲಿ ಅದನ್ನು ಅನುಭವಿಸುತ್ತಿದ್ದೇನೆ. ಕಳಪೆ ಬೀಜವನ್ನು ಚನ್ನಾಗಿದೆ ಎಂದು ಸರ್ಟಿಫೈ ಮಾಡಿ ಒಂದು ಪ್ಲಾಸ್ಟಿಕ್ ಬ್ಯಾಗನಲ್ಲಿ ಹಾಕಿ ಕೊಟ್ಟ ತಕ್ಷಣ ನಮ್ಮ ರೈತ 10ರೂ. ಜಾಸ್ತಿ ನೀಡಿ ಬಿತ್ತನೆ ಬೀಜವನ್ನು ಕೊಂಡುಕೊಂಡು ಹೋಗಿ ಇವತ್ತು ಸರ್ವನಾಶವಾಗುತ್ತಿದ್ದಾನೆ. ಇನ್ನೊಂದು ಕಡೆ, ಹಿಂದೆಂದೂ ಕಾಣದಂತಹ ವಿಚಿತ್ರ ರೋಗಗಳು ಬಂದರೆ, ನಿಮ್ಮ ಇಲಾಖೆಯಿಂದ ಆ ಬಗ್ಗೆ ಪರಿಶೀಲನೆ ಮಾಡಿ, ಆ ಸಮಯಕ್ಕೆ ತಕ್ಕ ಹಾಗೆ ತಿಳುವಳಿಕೆ ಕೊಡಬೇಕು.

ಅಧ್ಯಕ್ಷರು : ನಿಮ್ಮ ಪ್ರಶ್ನೆಯನ್ನು ಸ್ವಲ್ಪ ಸರಳೀಕರಣಗೊಳಿಸೋಣ. ನೀವು ಹೇಳಿದ ವೈಜ್ಞಾನಿಕ ಕಾರಣಗಳನ್ನು ಹೇಳಿಕೊಳ್ಳುತ್ತಾ, ನಕಲಿ ಬೀಜಗಳನ್ನು ಹಂಚಿಕೆ ಮಾಡಿ ರೈತರಿಗೆ ವಂಚನೆ ಮಾಡತಕ್ಕಂಥ ಒಂದು ವ್ಯವಸ್ಥಿತ ಜಾಲ ಇದೆ ಎಂಬುದು ತಮಗೂ ಗೊತ್ತಿದೆ. ಈ ಬಗ್ಗೆ ತಾವೇ ಹೇಳಿದಿರಿ. ಆದ್ದರಿಂದ ಅದರ ಬಗ್ಗೆ ಸೂಕ್ತವಾದ ಕ್ರಮವನ್ನೂ ತೆಗೆದುಕೊಳ್ಳಬೇಕು ಮತ್ತು ಪರಿಹಾರ ಕೊಡುವುದಕ್ಕೆ ಕೂಡ ಏನಾದರೂ ಒಂದು ವ್ಯವಸ್ಥೆ ಮಾಡಿ ಎಂದು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬೆಳೆ ವಿಮೆ ಇದಕ್ಕೆ ಬರುವುದಿಲ್ಲ. ಬಂದರೆ ನಾವು ಮಾನ್ಯ ಮಂತ್ರಿಗಳಿಂದ ಇನ್ನೇನೂ ಕೇಳುವುದಿಲ್ಲ. ಬೆಳೆ ವಿಮೆ ಇದಕ್ಕೆ ಅನ್ವಯವಾಗದೇ ಇದ್ದರೆ ಯಾರ ಬೆಳೆಗಳು ನಾಶ ಆಗಿವೆಯೇ ಅವರಿಗೆ ಏನಾದರೂ ಪರಿಹಾರ ಕೊಡತಕ್ಕ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಸಿ. ಬೈರೇಗೌಡ : ಪರಿಹಾರ ಕೊಡುವ ಬಗ್ಗೆ ನಾನು ತಕ್ಷಣದಲ್ಲಿ ಉತ್ತರ ಹೇಳಲಿಕ್ಕೆ ಕಷ್ಟವಾಗುತ್ತದೆ ನಾನು ಈ ಬಗ್ಗೆ ಮಾನ್ಯ ಹಣಕಾಸು ಮಂತ್ರಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಯವರಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಇವತ್ತು ಒಂದೇ ಕಾರಣದಿಂದ ಬೆಳೆಗಳು ನಾಶವಾಗುತ್ತಿಲ್ಲ. ಕೆಲವು ಕಡೆ ಮಳೆ ಬಾರದೇ ಇದ್ದಾಗಲೂ ಕೂಡ ಬೆಳೆಗಳು ನಾಶವಾಗುತ್ತಿವೆ. ಕೆಲವು ಕಡೆ ಏನಾಗುತ್ತದೆ ಎಂದರೆ, ಕೆಲವು ಪೆಸಟ್ಟ ಡಿಮಿಕ್ ಆಗಿದ್ದಾವೆ, ಅವು ಬೆಳೆಗಳನ್ನು ಹಾಳು ಮಾಡುತ್ತಿವೆ. ಹೀಗೆ ಒಂದಲ್ಲಾ ಒಂದು ಕಾರಣದಿಂದಾಗಿ ಬೆಳೆ ನಾಶವಾಗುತ್ತಿದೆ. ಆದರೆ ಎಲ್ಲಾ ಸಂದರ್ಭಗಳಲ್ಲೂ ಕೂಡ ಸರ್ಕಾರವು ಪರಿಹಾರವನ್ನು ಕೊಡಬೇಕೆಂದರೆ, ಸರ್ಕಾರದ ಬೊಕ್ಕಸದ ಅರ್ಧ ಭಾಗದಷ್ಟು ಹಣವನ್ನು ಇದಕ್ಕೇ ವಿನಿಯೋಗ ಮಾಡಬೇಕಾಗುತ್ತದೆ. ಆದ್ದರಿಂದಲೇ ನಾನು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳ ಜೊತೆಗೆ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತೊಗರಿ ಬೆಳೆ ನಾಶ ಆದಾಗ ಅದಕ್ಕೆ ಪರಿಹಾರ ಕೊಡಿಸಿದರು. ಇಳುವರಿ ಕಡಿಮೆಯಾಗಿದೆ, ರೈತ ಹಾಳಾಗಿ ಹೋಗುತ್ತಿದ್ದಾನೆ ಎಂದು ಮಾನ್ಯ ಮಂತ್ರಿಗಳೇ ಒಪ್ಪಿಕೊಳ್ಳುತ್ತಾರೆ. ಅದಕ್ಕಾಗಿ ಈ ಬಗ್ಗೆ ಪರಿಶೀಲನೆ ಮಾಡಿ ರೈತರಿಗೆ ಅನುಕೂಲ ಮಾಡಿ ಕೊಡುವಂತಹ ಒಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು : ಮಾನ್ಯ ಸದಸ್ಯರೇ ಮಾನ್ಯ ಮಂತ್ರಿಗಳಿಗೆ ಉತ್ತರ ಹೇಳಿ ಕೊಡುತ್ತಿದ್ದಾರೆ. 'ಪರಿಶೀಲನೆ ಮಾಡಿ' ಎಂದು ಹೇಳಿದರೆ ಮಾನ್ಯ ಮಂತ್ರಿಗಳಿಗೆ ಅದೂ ಕಷ್ಟವೇ ?

ಶ್ರೀ ಸಿ. ಬೈರೇಗೌಡ : ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳ ಜೊತೆಗೆ ಚರ್ಚೆ ಮಾಡುತ್ತೇನೆ ಎಂದು ಆಗಲೇ ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನದಲ್ಲಿ 'ಪರಿಶೀಲನೆ' ಎಂದರೆ ಅದನ್ನು ಸೀರಿಯಸ್ ಆಗಿ ತೆಗೆದುಕೊಂಡು ಒಂದು ಕಾನೂನಿನ ಚೌಕಟ್ಟಿನಲ್ಲಿ ಆ ಬಗ್ಗೆ ಮಂತ್ರಿ ಮಂಡಲದಲ್ಲಿ ಚರ್ಚೆ ಮಾಡಿ, ಅದಕ್ಕೆ ಏನಾದರೂ ಒಂದು ಅವಕಾಶ ಸಿಗುತ್ತದೆ ಎಂದು ನಾನು ಭಾವಿಸಿದ್ದೇನೆ. ಪರಿಶೀಲನೆ ಹೆಸರಿನಲ್ಲಿ ಎಲ್ಲಾ ಅರ್ಥವಿಲ್ಲದ ಉತ್ತರವಾಗುವುದಿಲ್ಲ.

ಅಧ್ಯಕ್ಷರು : 'ಪರಿಶೀಲನೆ' ಅಂದರೆ ಅದು 'ಅನಂತ' ಎಂದು ನಾನು ಮೊನ್ನೆನೇ ಹೇಳಿದೆನಲ್ಲ.

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೇ, ನಾನು ಕೃಷಿ ಮಂತ್ರಿಗಳಿಗೊಂದು ವಿನಂತಿಮಾಡಿಕೊಳ್ಳುತ್ತೇನೆ. ರೈತರ ಕಡೆಗೆ ನಾವು ಹೆಚ್ಚಿನ ಗಮನ ಹರಿಸಬೇಕೆಂದು ಕೋರುತ್ತಾ ತಮಗೆ ಸಂಬಂಧಪಟ್ಟಂತೆ ಮತ್ತೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಕಮಲಾಪುರ ಮತ ಕ್ಷೇತ್ರದಲ್ಲಿ ತಮ್ಮ ಇಲಾಖೆಯಿಂದ ಸಾಲಾಬಂಡಿ ಕಟ್ಟುತ್ತಿದ್ದಾರೆ.

ಅಧ್ಯಕ್ಷರು : ತಾವು ಪ್ರಸ್ತಾಪಿಸುತ್ತಿರುವ ವಿಷಯಕ್ಕೂ ಈ ಪ್ರಶ್ನೆಗೂ ಯಾವುದೇ ಸಂಬಂಧವಿಲ್ಲ. ಅದು ಬೇರೆಯೇ ಪ್ರಶ್ನೆಯಾಗುತ್ತದೆ.

ಶ್ರೀ ರೇವು ನಾಯಕ್ ಬೆಳಮಗಿ : ಅಲ್ಲಿ ನಾಲಾಬಂಡಿ ಕಟ್ಟುತ್ತಿದ್ದಾರೆ, ಆದರೆ ಅಲ್ಲಿ ಅದಕ್ಕೆ ಬೇಕಾದ ಸಿಮೆಂಟೇ ಇಲ್ಲ. ಈ ಬಗ್ಗೆ ತಾವು ಗಮನ ಹರಿಸಬೇಕು. ಈ ಬಗ್ಗೆ ನಾನು ಮೊದಲೇ ತಮಗೆ ಮನವಿ ಪತ್ರ ಕೊಟ್ಟಿದ್ದೇನೆ. ಅದರ ಬಗ್ಗೆ ಸ್ವಲ್ಪ ಹೆಚ್ಚಿನ ಗಮನ ಕೊಡಬೇಕೆಂದು ಈಗ ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬೈರೇಗೌಡ : ಇದು ಅದಕ್ಕೆ ಸಂಬಂಧಪಡದೇ ಇದ್ದರೂ ಸಹ ಈ ಸಂದರ್ಭದಲ್ಲಿ ನಾನು ಉತ್ತರ ಹೇಳುವುದಕ್ಕೆ ಸಿದ್ಧನಿದ್ದೇನೆ. ಅವರು ಈಗ ಗಮನಕ್ಕೆ ತಂದಿದ್ದಾರೆ, ಈಗಾಗಲೇ ತತಕ್ಷಣ ಅವರಲ್ಲಿರತಕ್ಕಂತಹ ಕಳಪೆ ಕಾಮಗಾರಿ ಏನಾದರೂ ನಡೆಯುತ್ತಿದ್ದರೆ ಅದರ ಬಗ್ಗೆ ತಕ್ಷಣ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸಭಾಧ್ಯಕ್ಷರೆ, ಬಹಳ ಮುಖ್ಯವಾದುದು ಬೀಜದ ಬಗ್ಗೆ ನಾನು ಕೃಷಿ ಸಮಿತಿಯಲ್ಲಿರುವುದರಿಂದ ಅದು ಬೇಕಾಗುತ್ತದೆ. ಬೀಜದವರು ಏನಾದರೂ ಕಳಪೆ ಬೀಜಗಳನ್ನು ಸರಬರಾಜು ಮಾಡತಕ್ಕಂತಹ ರಸೀದಿ ಇದ್ದರೆ ಅವರಿಗೆ ಕನಿಷ್ಟ ಪರಿಹಾರ ಕೊಡುವ ಬಗ್ಗೆ ಕೃಷಿ ಸಮಿತಿಯಲ್ಲಿ ತೀರ್ಮಾನವಾಗಿದೆ. ನಂತರ ಕಂಸ್ಯೂಮರ್ ಫಾರಂಗೆ ಹೋಗಬಹುದು ಎನ್ನುವ ಒಂದು ಆಲೋಚೋನೆ ಮಾಡಿದ್ದೇವೆ. ಆದರೆ ಇದರಲ್ಲಿ ಬಹಳ ಗಂಭೀರವಾಗಿ ಬೀಜ ನಿಗಮ ಮಂಡಳಿಗಳ ಬಗ್ಗೆ, ಕರ್ನಾಟಕ ಬೀಜ ನಿಗಮ ಮಂಡಳಿಗಳು ತ್ವರಿತವಾಗಿ ಕೆಲಸ ಮಾಡಿ ಖಾಸಗಿಯಿಂದ ತಪ್ಪಿಸತಕ್ಕಂತಹ ಹೆಚ್ಚು ಜವಾಬ್ದಾರಿ ಕೆಲಸವನ್ನು ಬೀಜ ನಿಗಮ ಮಂಡಳಿಗಳು ಮಾಡಿದರೆ ಈ ಒಂದು ಅನಾನುಕೂಲವನ್ನು ತಪ್ಪಿಸುವುದಕ್ಕೆ ಸಾಧ್ಯ. ಏಕೆಂದರೆ ಬಹಳ ಮುಖ್ಯವಾದುದು ಒಂದು ದೇಶದಲ್ಲಿ ಅಪಾಯಕಾರಿ ಎಂದರೆ ಉತ್ತಮವಾದ ಬಿತ್ತನೆ ಬೀಜವನ್ನು ಸರಬರಾಜು ಮಾಡದೇ ಇದ್ದರೆ ಅದು ಸರ್ಕಾರ ಇದ್ದೂ ಇಲ್ಲದ ಹಾಗಾಗುತ್ತದೆ. ಆದರಿಂದ ಬಿತ್ತನೆ ಬೀಜದ ಬಗ್ಗೆ ಸರ್ಕಾರ ಹೊಣೆಗಾರಿಕೆ ಹೆಚ್ಚಿದ್ದರೆ ಮಾತ್ರ ಈ ಸಮಸ್ಯೆ ಬಗೆಹರಿಯುವುದಕ್ಕೆ ಸಾಧ್ಯ. ಇಲ್ಲದೇ ಇದ್ದರೆ, ಎಷ್ಟು ಜನ ಕಳ್ಳರನ್ನು ಕಂಡುಹಿಡಿದರೂ ಹೊಸ ಕಳ್ಳರು ಉತ್ಪತ್ತಿ ಆಗುತ್ತಿರುತ್ತಾರೆ. ಇದರ ಬಗ್ಗೆ ಬೀಜ ನಿಗಮ ಮಂಡಳಿಗಳು ಅತ್ಯಂತ ಜವಾಬ್ದಾರಿಯಿಂದ ಕೆಲಸ ಮಾಡಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನೂ ಸಹ ರಾಜ್ಯದ ನಾನಾ ಭಾಗಗಳಲ್ಲಿ ಪ್ರವಾಸ ಮಾಡಿದ್ದೇನೆ. ಬೀಜ ಸರಬರಾಜು ಮಾಡತಕ್ಕಂತಹ, ಬೀಜ ಬೆಳೆದು ಕೊಡತಕ್ಕಂತಹ ವ್ಯವಸ್ಥೆ ಸಮರ್ಪಕವಾಗಿ ಇಲ್ಲ ಎನ್ನತಕ್ಕಂಥದ್ದು ನನ್ನ ಅನುಭವಕ್ಕೂ ಬಂದಿದೆ. ಬೆಳೆದಂತಹ ಬೆಳೆಯಲ್ಲಿ ನಾನು ಹೋಗಿ ನೋಡಿದ್ದೇನೆ, ರಾಗಿ ಬೆಳೆ ಬೆಳೆಯಿತು ಎಂದರೆ ಮುಕ್ಕಾಲು ಅಡಿ, ಅರ್ಧ ಅಡಿಯಿಂದ ಹಿಡಿದು ಒಂದೂವರೆ ಅಡಿ ಎರಡು ಅಡಿ ಎತ್ತರ ಬೆಳೆದಿರತಕ್ಕಂತಹ ಬೆಳೆಯನ್ನು ಒಂದೇ ಹೊಲದಲ್ಲಿ ನಾನು ನೋಡಿದ್ದೇನೆ. ಬರೀ ರಾಗಿ ಅಲ್ಲ, ಭತ್ತದಲ್ಲೂ ನೋಡಿದ್ದೇನೆ. ಜೋಳದಲ್ಲೂ ನೋಡಿದ್ದೇನೆ. ಅವೆಲ್ಲವೂ ಸಹ ನಿಜ. ಮಾನ್ಯ ಪುಟ್ಟಣ್ಣಯ್ಯನವರು ಹೇಳತಕ್ಕಂದ್ದರಲ್ಲಿ ನಿಜ ಇದೆ. ಇದನ್ನು ಸರಿಪಡಿಸುವುದಕ್ಕೆ ತೀವ್ರವಾಗಿ ಕ್ರಮವನ್ನು ನಾನು ತೆಗೆದುಕೊಳ್ಳುತ್ತಿದ್ದೇನೆ. ಇದು ಬಹಳ ವರ್ಷಗಳಿಂದ ಈ ರೀತಿಯಾಗಿ ಬಂದಿದೆ. ಒಂದೇ ವರ್ಷದಲ್ಲಿ ಅಥವಾ ಎರಡು ವರ್ಷದಲ್ಲಿ ಇದು ಸರಿ ಹೋಗುತ್ತದ್ದೆ ಎನ್ನತಕ್ಕಂಥ

ನಂಬಿಕೆ ನನ್ನದಲ್ಲ. ಆದರೆ ಬಹಳ ತೀವ್ರವಾದ ಪ್ರಯತ್ನ, ನನ್ನ ಶಕ್ತಿ ಮೀರಿ ನಾನು ಇದರಲ್ಲಿ ಪ್ರಯತ್ನ ನಡೆಸುತ್ತಿದ್ದೇನೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಹೇಳುವುದಕ್ಕೆ ಇಚ್ಛಪಡುತ್ತೇನೆ.

ಅಧ್ಯಕ್ಷರು : ಸಂಗಣ್ಣ ಕರಡಿ, ನಿಮ್ಮ ಪ್ರಶ್ನೆಗೆ ನಿನ್ನೆ ನೀವು ಇದರಲಿಲ್ಲ, ಇವತ್ತು ಮಂತ್ರಿಗಳು ಇಲ್ಲ. ಇವತ್ತು ಮತ್ತೆ ನಿಮ್ಮ ಪ್ರಶ್ನೆ ಬಂದಿದೆ ಮಂತ್ರಿಗಳು ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೀಗೆ ಪ್ರಶ್ನೆ ಇದ್ದಾಗ ಮಂತ್ರಿಗಳು ಇಲ್ಲ, ಮಂತ್ರಿ ಇದ್ದಾಗ ಪ್ರಶ್ನೆ ಇಲ್ಲ, ಎಂದರೆ ಹೇಗೆ?

ಅಧ್ಯಕ್ಷರು : ಅವರು ನಮ್ಮ ಅನುಮತಿ ಪಡೆದುಕೊಂಡು ಹೋಗಿದ್ದಾರೆ. ಅವರು ನಮ್ಮ ಹಾಗೆ ಮನಷ್ಯರು. ಏನೋ ಪಾಪ ಒಂದು ನಿರ್ಬಂಧ ಏರ್ಪಟ್ಟಿದೆ, ಇವತ್ತು ಬರುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಸಭೆಗೆ ಗ್ರಹಣ ಏನಾದರೂ ಹಿಡಿದಿದೆಯೇ ಎಂದು ನಮಗೆ ನೋವಾಗುತ್ತಿದೆ. ಮಂತ್ರಿಗಳು ಒಂದು ಕಡೆ ಅವರು ಪರಿಶೀಲನೆ ಎಂದು ಹೇಳುವುದು, 200-300 ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ. ಮಂತ್ರಿಗಳು ಗೈರು ಹಾಜರಾದರೆ ತಮ್ಮ ಮನಸ್ಸಿನಲ್ಲಿ ನೋವು ಆಗಿದೆ ಎಂದು ನನಗನ್ನಿಸುತ್ತಿದೆ. ಈ ಪರಿಸ್ಥಿತಿ ಉದ್ಭವ ಆದರೆ ಈ ಸಭೆ ಏಕೆ ನಡೆಯಬೇಕು? ಈ ಸಭೆಯನ್ನು ಮುಂದಕ್ಕೆ ಹಾಕಿ ಬಿಡಿ. ಏಕೆಂದರೆ ಇದಕ್ಕೆ ಏನಾದರೂ ಅರ್ಥ ಇದೆಯಾ? ಏನಾದರೂ ಬೆಲೆ ಬರುತ್ತದೆಯೇ ಈ ಕಾಟಾಚಾರದ ಸಭೆ ನಡೆದರೆ ಏನು ಇದು ಸರಿಯಲ್ಲ. ಯಾರಾದರೂ ಒಬ್ಬರು ಹಾಜರಿರಬೇಕು.

ಅಧ್ಯಕ್ಷರು : ಮಂತ್ರಿಗಳು ನನ್ನ ಅನುಮತಿ ಪಡೆದು ಹೋಗಿದ್ದಾರೆ. ನನ್ನ ಮನಸ್ಸಿನ ಆಳ ನಿಮ್ಮೊಬ್ಬರಿಗೆ ಗೊತ್ತಿರುವುದು. ಬೇರೆ ಯಾರಿಗೂ ಗೊತ್ತಿಲ್ಲ, ಇದು ಬಹಳ ಸಂತೋಷ. ನನಗೆ ಏನು ಆನಂದ ನೋಡಿ ನಾನು ನಮ್ಮ ಮನೆಯವರಿಗೆ ಒಬ್ಬರಿಗೆ ನನ್ನ ಮನಸ್ಸು ಗೊತ್ತಾಗಿದೆ ಎಂದು ತಿಳಿದುಕೊಂಡಿದ್ದೆ, ನೀವು ಅವರಿಗಿಂತ ಮುಂದಕ್ಕೆ ಹೋಗಿ ತಿಳಿದುಕೊಂಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಕೆಲವು ವಿಚಾರಗಳು ನಿಮ್ಮ ಮನೆಯವರಿಗೆ ಗೊತ್ತಿವೆ, ಕೆಲವು ವಿಚಾರಗಳು ನನಗೆ ಗೊತ್ತಿವೆ.

ಅಧ್ಯಕ್ಷರು : ನಿಮಗೆ ಗೊತ್ತಿರುವಂಥದ್ದು ಅವರಿಗೆ ಯಾವತ್ತೂ ಹೇಳುವುದಕ್ಕೆ ಹೋಗಬೇಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅಧ್ಯಕ್ಷರೆ, ಸಧ್ಯ ವಾಟಾಳ್ ನಾಗರಾಜ್‌ರವರ ಮನೆಯವರ ವಿಷಯ ಗೊತ್ತಿಲ್ಲ ತಾನೆ. ಅದಕ್ಕೆ ನಾವು ಸಂತೋಷ ಪಡೋಣ.

ಅಧ್ಯಕ್ಷರು : ಸುರೇಶ್‌ಕುಮಾರರವರ ಪ್ರಶ್ನೆ ಕಂದಾಯ ಇಲಾಖೆಗೆ ಹಾಕಿದ್ದಾರೆ, ಅದು ಟ್ರಾನ್ಸಫರ್ ಮಾಡಿದ್ದಾರೆ ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗೆ ಇದೆ.